



ಚೈನ್ ಬ್ರಿಡ್ಜ್



ರೂಯಿನ್ಡ್ ಪಬ್

ಹಂಗೆರಿ ದೇಶದ ರಾಜಧಾನಿ ಬೂಡಪೆಸ್ಟ್ 'ಪೂರ್ವ ಯೂರೋಪಿನ ಪ್ಯಾರಿಸ್' ಎಂದೇ ಪ್ರಸಿದ್ಧ. ಇಲ್ಲಿ ಯುನೆಸ್ಕೊ ಮಾನ್ಯತೆ ಪಡೆದ ವಿಶ್ವ ಪರಂಪರೆಯನ್ನು ಪ್ರತಿಬಿಂಬಿಸುವ ಸ್ಮಾರಕಗಳು, ಅರಮನೆಗಳು, ಪ್ರಾಚೀನ ಕಟ್ಟಡಗಳು ಸೇರಿದಂತೆ ಅನೇಕ ಕುತೂಹಲಕಾರಿ ಪ್ರವಾಸೀ ತಾಣಗಳಿವೆ.

ಯೂರೋಪಿನುದ್ದಕ್ಕೂ ಹರಿಯುವ ಡಾನ್ಯೂಬ್ ನದಿ ಸಹಜವಾಗಿ ಉತ್ತರ–ದಕ್ಷಿಣಕ್ಕೆ ವಿಭಜಿಸಿರುವ ನಗರಗಳೇ ಬೂಡ ಮತ್ತು ಪೆಸ್ಟ್. ನದಿಯ ಪಶ್ಚಿಮ ದಡದಲ್ಲಿ, ಬೆಟ್ಟಗುಡ್ಡಗಳ ನಡುವೆ ಬೂಡ ಪ್ರದೇಶವಾದರೆ, ಪೂರ್ವ ದಿಕ್ಕಿನಲ್ಲಿ ಬೆಳೆದಿರುವ ನಗರ ಪೆಸ್ಟ್. ಈ ಪ್ರದೇಶದ ಇತಿಹಾಸ ಸುಮಾರು 3000 ವರ್ಷಗಳಷ್ಟು ಪುರಾತನವಾದರೂ, ಇವೆರಡೂ ನಗರಗಳ ಒಂದುಗೂಡುವಿಕೆಯಾದದ್ದು 1873ರಲ್ಲಿ.

## ಹೀರೋಸ್ ಸ್ಕ್ವೇರ್

ಬೂಡಪೆಸ್ಟ್‌ನಲ್ಲಿ ಚಿತ್ರಿಸಿದ ಅನೇಕ ಬಾಲಿವುಡ್ ಚಿತ್ರಗಳ ಕುರಿತು ಬಸ್ಸಿನಲ್ಲಿನ ನಮ್ಮ ಹರಟೆಯ ಸುಳಿವು ಗೈಡ್‌ಗೆ ತಿಳಿಯಿತು. ಹಾಗಾಗಿ, ಇಲ್ಲಿನ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಶುರುವಾದದ್ದು ಹೀರೋಸ್ ಸ್ಕ್ವೇರ್‌ನಿಂದ! 1900ರಲ್ಲಿ ನಿರ್ಮಿಸಲಾದ ಈ ರಾಷ್ಟ್ರೀಯ ಸ್ಮಾರಕ ವಿಶಾಲವಾಗಿಯೂ, ಆಕರ್ಷಣೀಯವಾಗಿಯೂ ಇದೆ. ನಗರದ ಅನೇಕ ಮುಖ್ಯ ಉತ್ಸವಗಳ ವೇದಿಕೆ ಸಜ್ಜಾಗುವುದು ಇಲ್ಲೇ. ಇದರ ಎಡ ಭಾಗಕ್ಕೆ ಕಲಾವಸ್ತು ಸಂಗ್ರಹಾಲಯವೂ (ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್) ಬಲ ಭಾಗಕ್ಕೆ ಕಲಾ ಅರಮನೆಯೂ (ಆರ್ಟ್ ಪ್ಯಾಲೇಸ್) ಇದೆ.

ಥರ್ಮಲ್ ಬಾತ್: ಹೀರೋಸ್ ಸ್ಕ್ವೇರ್ ಪಕ್ಕದಲ್ಲೇ ಇರುವ ವಿಶೇಷವಾದ ಆಕರ್ಷಣೆ ಬಿಸಿನೀರಿನ ಸ್ನಾನದ ಕೊಳಗಳು. ಇವುಗಳಲ್ಲಿ ಅತ್ಯಂತ ಹೆಸರುವಾಸಿಯಾಗಿರುವ ಶೆಚೆನ್ವಿ ಕೊಳಗಳಿಗೆ ನೂರು ವರ್ಷಗಳ ಇತಿಹಾಸವಿದೆ. ಇದು ಸಾಮಾನ್ಯವಾದ ಬಿಸಿನೀರಿನ ಕೊಳಗಳಷ್ಟೇ ಅಲ್ಲ! ಇಲ್ಲಿನ ನೀರಿನಲ್ಲಿ ನೈಸರ್ಗಿಕವಾದ ರೋಗಗಳನ್ನು ಗುಣಪಡಿಸುವ ಶಕ್ತಿಯಿದೆ ಎನ್ನುತ್ತಾರೆ. ಈ ಆವರಣದಲ್ಲಿ ಮಸಾಜ್, ಸೌನ, ಜಾಕುಜಿ, ವರ್ಲ್‌ಪೂಲ್, ಜಿಮ್‌ಗಳಂತಹ ಆಧುನಿಕ ವ್ಯವಸ್ಥೆಗಳಿದ್ದು, ಸ್ಥಳೀಯರಿಗೆ ಇದೊಂದು ಸೌಂದರ್ಯವರ್ಧಕ ಮತ್ತು ಆರಾಮದಾಯಕ ಆರೋಗ್ಯಧಾಮವೂ ಹೌದು. ನೈಸರ್ಗಿಕ ಬಿಸಿನೀರಿನ ಸ್ನಾನದ ಆನಂದವನ್ನು ಪ್ರವಾಸಿಗರೂ ಅನುಭವಿಸಬಹುದು.